ಅವರ ಗಮನ ಸೆಳೆಯುವ ಸೂಚನೆಗಳಿವೆ. ಅವುಗಳಿಗೆ ಉತ್ತರಿಸುವುದಕ್ಕೂ ಕೂಡ ಮಾನ್ಯ ಕಂದಾಯ ಸಚಿವರೇ ಬೇಕಾಗುತ್ತದಲ್ಲಾ?

ಶ್ರೀ ಕೆ. ಅಭಯಚಂದ್ರ(ಸರ್ಕಾರಿ ಮುಖ್ಯ ಸಚೇತಕರು) : ಅವೆರಡಕ್ಕೂ ಮಾನ್ಯ ಸಿಂಧ್ಯಾರವರೇ ಉತ್ತರ ಕೊಡುತ್ತಾರೆ. ತಾವು ಅದನ್ನು ತೆಗೆದುಕೊಳ್ಳಬಹುದು.

ವಿಷಯ : (VI) ಚಾಮರಾಜನಗರ ಜಿಲ್ಲೆಗೆ ಬರ ಪರಿಹಾರ ಕಾಮಗಾರಿ ಕುರಿತು.

ಶ್ರೀ ಎಸ್. ಬಾಲರಾಜ್ (ಕೊಳ್ಳೇಗಾಲ) : ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಜಿಲ್ಲೆಗೆ ಬರ ಪರಿಹಾರ ಕಾಮಗಾರಿ ಕುರಿತು ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಬರಗಾಲ ಇದ್ದುದ್ದರಿಂದ, ಅಭಾವ ಪರಿಹಾರ ಕಾಮಗಾರಿಗಳಿಗಾಗಿ, ಕುಡಿಯುವ ನೀರಿಗಾಗಿ ಮತ್ತು ಜಾನುವಾರುಗಳ ಮೇವಿನ ವ್ಯವಸ್ಥೆಗಾಗಿ ಸರ್ಕಾರವು ರೂ. 1420.15 ಲಕ್ಷ ರೂ. ಹಾಗೂ 36053 ಮೆಟ್ರಿಕ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಲಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು 5740 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

† **ಶ್ರೀ ಎಸ್. ಬಾಲರಾಜ್** : ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರದಲ್ಲಿ ತಿಳಿಸಿರುವ ರೀತಿಯಲ್ಲಿ ಒಟ್ಟಾರೆ ಮೂರು ವರ್ಷಗಳಲ್ಲಿ ಏನು ಕಾಮಗಾರಿ ಕೈಗೊಳ್ಳಲಾಗಿದೆಯೋ ಅದರ ಬಗ್ಗೆ ಮಾತ್ರ ಕೊಟ್ಟಿದ್ದಾರೆ. ನಾನು ಬಹಳ ವಿವರವಾಗಿ ಈ ಬಗ್ಗೆ ತಿಳಿದುಕೊಳ್ಳಬೇಕೆಂದು ಬಯಸಿದ್ದೆ ಆದರೆ ಕೇವಲ 3 ವರ್ಷಗಳಿಂದ ಬಂದಿರತಕ್ಕಂಥ ಈ ಹಣದಲ್ಲಿ ಅಥವಾ ಇಲ್ಲಿಗೆ ಬಂದಿರತಕ್ಕಂಥ ಆಹಾರ ಧಾನ್ಯಗಳಲ್ಲಿ ಅಸಮರ್ಪಕವಾಗಿ ಇದುವರೆವಿಗೂ ಕಾಮಗಾರಿ ನಡೆದಿದೆ ಎನ್ನತಕ್ಕಂಥದ್ದು ಈಗಾಗಲೇ ಈ ಸದನದಲ್ಲಿ ಜಗತ್‌ಜಾಹೀರಾಗಿದೆ. ಹಗರಣಗಳ ಸರಮಾಲೆ ಈ ಕಾಮಗಾರಿಗಳ ಅನುಷ್ಠಾನದಲ್ಲಿ ನಡೆದಿರುವುದು ಹೊರಗಡೆ ಕೂಡ ಗೊತ್ತಾಗಿದೆ. ಇತ್ತೀಚೆಗೆ ಅಂದರೆ ಈ ಸಾಲಿನಲ್ಲಿ ನಾನು ಕಳೆದ 4–5 ತಿಂಗಳುಗಳಿಂದ ನೋಡಿದಂತೆ ಯಾವುದೇ ಒಂದು ಕಾಮಗಾರಿ ಎಲ್ಲೂ ಕೂಡ ಪ್ರಗತಿಯಾಗುತ್ತಿರುವುದನ್ನು ನಾನು ನೋಡಿಲ್ಲ. ಇರತಕ್ಕಂಥ ಕಡಿಮೆ ಪ್ರಮಾಣದ ಹಣದಲ್ಲಿ ಕೆಲವೊಂದು ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಆ ಕಾಮಗಾರಿಗಳಿಗೆ ಅನುಮೋದನೆಯನ್ನು ಜಿಲ್ಲಾಧಿಕಾರಿಗಳು ಇನ್ನೂ ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳು ಮೌಖಿಕವಾಗಿ ಹೇಳಿರತಕ್ಕಂಥ ವಿಚಾರಗಳಲ್ಲಿ ಈಗಾಗಲೇ ಕೆಲಸವನ್ನು ಮಾಡಿದ್ದಾರೆ. ರೈತರು, ಕಾರ್ಮಿಕರು, ದುಡಿದಂತಹ ಕೆಲಸಗಾರರು ನನ್ನ ಮನೆ ಬಾಗಿಲಿಗೆ ಬಂದು, ಬೇಗ ನಮಗೆ ಕಾಳು ಕೊಡಿಸಿ ಎಂದು ಕೇಳತಕ್ಕಂಥ ದುಸ್ಥಿತಿ ಬಂದೊದಗಿದೆ. ಇದು ಯಾರ ತಪ್ಪಿನಿಂದಾಗಿ ಆಗಿದೆ ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರ ಸೂಕ್ತವಾಗಿ ಗಮನ ಹರಿಸಬೇಕು. ಕೂಡಲೇ ದುಡಿದಂತಹ ಕೈಗಳಿಗೆ ಆಹಾರ ಧಾನ್ಯಗಳನ್ನು ಒದಗಿಸತಕ್ಕಂಥ ಕ್ರಮವನ್ನು

ತೆಗೆದುಕೊಳ್ಳಬೇಕು ಎನ್ನುವುದು ನನ್ನ ಮೊದಲನೆಯ ಒತ್ತಾಯವಾಗಿದೆ. ಎರಡನೆಯದಾಗಿ,' ಈಗಾಗಲೇ ಬಹಳಷ್ಟು ತೊಂದರೆಗಳಲ್ಲಿ ರೈತರು ಸಿಕ್ಕಿ ಹಾಕಿಕೊಂಡಿದಾರೆ. '5 ಸಾವಿರ ಜನಸಂಖ್ಯೆ ಇರತಕ್ಕಂಥ ಒಂದು ಗ್ರಾಮದಲ್ಲಿ 2–3 ಸಾವಿರ ಇರುವ ದುಡಿಯತಕ್ಕಂಥ ರೈತಾಪಿ ವರ್ಗಕ್ಕೆ ಇವತ್ತು ಕೂಲಿ ಕೆಲಸ ಕೊಡುವ ನಿಟ್ಟಿನಲ್ಲಿ ಅಲ್ಲಿರತಕ್ಕಂಥ ಕೇವಲ ಹತ್ತಿಪ್ಪತ್ತು ಸಾವಿರ ರೂಪಾಯಿಗಳ ಕೆಲಸವನ್ನು ಮಾತ್ರ ಈ ನಾಲ್ಕು ತಿಂಗಳಿನಲ್ಲಿ ಮಾಡಿದ್ದಾರೆ ಎಂದರೆ, ಕೇವಲ 250–300 ಮಾನವ ದಿನಗಳಿಗೆ ಊರಿನಲ್ಲಿ ಇರತಕ್ಕಂಥ ಜನ ದುಡಿಯುವುದು ಹೇಗೆ? ಆದಷ್ಟು ಸರಿಯಾದ ರೀತಿಯಲ್ಲಿ ಕೆಲಸ ಕೊಡುವ ನಿಟ್ಟಿನಲ್ಲಿ ಸರ್ಕಾರ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ವೈಜ್ಞಾನಿಕವಾಗಿ ಬೆಲೆಯನ್ನು ನಿಗದಿ ಮಾಡಬೇಕು. ಕೂಲಿಯನ್ನು ನಿಗದಿ ಮಾಡಬೇಕು. ಆ ಮುಖಾಂತರ ಜನರಿಗೆ ಆಸರೆಯಾಗಬೇಕೆ ಹೊರತು ಸರ್ಕಾರ ಮಾಡತಕ್ಕಂಥ ಕೆಲಸಗಳು ಜನರಿಗೆ ತಲುಪಿಲ್ಲ ಅನ್ನತಕ್ಕಂಥದ್ದನ್ನು ನಾವು ಕೇಳುತ್ತಿದ್ದೇವೆ. ಇದೊಂದು ದುರಂತ ಎಂದು ನಾನು ಭಾವಿಸಿದ್ದೇನೆ, ಅದಕ್ಕಾಗಿ ತಾವು ಮುಂದಿನ ದಿವಸಗಳಲಿ ವೈಜ್ಞಾನಿಕವಾಗಿ ಬೆಲೆಯನ್ನು ನಿಗದಿ ಮಾಡುವುದರ ಜೊತೆಗೆ, ಸಮರ್ಪಕವಾಗಿ ಈ ಕಾಳು ವಿತರಣೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ. ಈಗ ನಮಗೆ ಕೊಟ್ಟಿರತಕ್ಕಂಥ ವರದಿ ವಾರ್ಷಿಕ ವರದಿಯಾಗಿದೆ. ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಹಣ ಮತ್ತು ಕಾಳು ಬಿಡುಗಡೆಯಾಗಿದೆ ಎನ್ನುವಂತಹ ವರದಿಯನ್ನೂ ಸಹ ಕೊಟ್ಟರೆ, ಬಹುಶಃ ಈ ನಮ್ಮ ಅಧಿಕಾರಾವಧಿಯಲ್ಲಿ ನಾವೇನು ಮಾಡಲಿಕ್ಕೆ ಸಾಧ್ಯವಿದೆ ಎಂಬುದನ್ನಾದರೂ ಜನರಿಗೆ ತೋರಿಸಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಆ ಒಂದು ಕೆಲಸವನ್ನು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಸಿಂಧ್ಯಾರವರೆ, ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಆ ಇಡೀ ಜಿಲ್ಲೆಯಲ್ಲಿನ ಕ್ಷೇತ್ರಗಳಲ್ಲಿ ಸುಮಾರು ಎರಡು ಸಾವಿರ ಕೊಳವೆ ಬಾವಿಗಳು ಕೆಟ್ಟು ಹೋಗಿ ಒಂದು ವರ್ಷವಾಗಿದೆ. ಕೆಟ್ಟು ಹೋಗಿ ವರ್ಷಗಟ್ಟಲೆಯಾದರೂ ಅದನ್ನು ರಿಪೇರಿ ಮಾಡಲಿಕ್ಕೆ ಆಗಿಲ್ಲ. ಅನೇಕ ಕಡೆ ನೀರೇ ಇಲ್ಲ. ಇದರಿಂದಾಗಿ ದನ–ಕರುಗಳಿಗೂ ಸಹ ಬಹಳ ತೊಂದರೆಯಾಗಿದೆ. ಹಿಂದುಳಿದ ಆ ಗಡಿ ಪ್ರದೇಶಗಳಲ್ಲಿ ತೆಂಗು ಸಂಪೂರ್ಣವಾಗಿ ನಾಶವಾಗಿದೆ. ರೇಷ್ಮೆ ಸಂಪೂರ್ಣವಾಗಿ ನಾಶವಾಗಿದೆ. ಇಂತಹ ಒಂದು ಪರಿಸ್ಥಿತಿ ಅಲ್ಲಿರುವುದರಿಂದ ವಿಶೇಷವಾದಂತಹ ಗಮನವನ್ನು ಸರ್ಕಾರ ಈ ಕಡೆಗೆ ನೀಡಬೇಕೆಂಬುದು ನನ್ನ ಕಳಕಳಿಯ ಮನವಿಯಾಗಿದೆ. ಪ್ರಾಮುಖ್ಯವಾಗಿ ಕುಡಿಯುವ ನೀರಿನ ಕೊಳವೆ ಬಾವಿಗಳು ಕೆಟ್ಟು ಹೋಗಿವೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾಗಿರತಕ್ಕಂಥ ಬಾಲರಾಜ್ ಮತ್ತು ವಾಟಾಳ್ ನಾಗರಾಜ್‌ರವರು ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದು ಅನೇಕ ವಿಚಾರಗಳಲ್ಲಿ ಕೆಲವೊಂದು

ಮಾಹಿತಿಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ, ಯಾವ್ಯಾವ ವರ್ಷ ಎಷ್ಟೆಷ್ಟು ಕೊಟ್ಟರು ಎಂಬ ಮಾಹಿತಿಯನ್ನು ಕೇಳಿದ್ದಾರೆ. 2001–02ನೇ ಸಾಲಿನಲ್ಲಿ ಚಾಮರಾಜ ನಗರ ಜಿಲ್ಲೆಗೆ 299.60 ಲಕ್ಷ ರೂಪಾಯಿಗಳನ್ನು ಬರಗಾಲ ಪರಿಹಾರ ನಿಧಿಯಲ್ಲಿ ಕೊಟ್ಟಿದ್ದೇವೆ, 2002–03ನೇ ಸಾಲಿನಲ್ಲಿ 382.45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 2003–04ನೇ ಸಾಲಿನಲ್ಲಿ 747.64 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಚಾರದಲ್ಲಿ ಹುರುಳಿದೆ. ಇದು ಸಮರ್ಪಕವಾಗಿ ಆಗಿಲ್ಲವೆಂದು ನಾನೂ ಸಹ ಒಪ್ಪುತ್ತೇನೆ. ಕಾಮಗಾರಿಗಳಿಗೆ ಡಿಸಿಯವರು ಅನುಮೋದನೆ ಕೊಟ್ಟಿಲ್ಲ ಎನ್ನತಕ್ಕಂಥದ್ದು ಚಾಮರಾಜನಗರ ಜಿಲ್ಲೆ ಅಷ್ಟೇ ಅಲ್ಲ, ಹಲವಾರು ಜಿಲ್ಲೆಗಳಿಂದ ಈ ರೀತಿ ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳು ಅನುಮೋದನೆ ಕೊಡುವುದು ಇರುವುದು ನನ್ನ ಗಮನಕ್ಕೆ ಕೂಡ ಬಂದಿದೆ. ಕೆಲಸಗಳು ಸ್ಥಗಿತವಾಗಿವೆ, ದುಡಿಯುವ ಕೈಗೆ ಕೆಲಸ ಕೊಡಬೇಕು, ಮತ್ತು ಕೂಲಿ ನಿಗಧಿ ಮಾಡಬೇಕೆಂಬ ವಿಚಾರವನ್ನು ತಾವು ಹೇಳಿದ್ದೀರಿ. ಅದಕ್ಕೋಸ್ಕರ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು, ನಮ್ಮ ಮಾನ್ಯ ಕಂದಾಯ ಸಚಿವರು, ಮಾನ್ಯ ಕೃಷಿ ಸಚಿವರು, ಮಾನ್ಯ ಪಶುಸಂಗೋಪನಾ ಇಲಾಖೆಯ ಸಚಿವರನ್ನು ಸದಸ್ಯರನ್ನಾಗಿ ಮಾಡಿ ನನ್ನನ್ನು ಮತ್ತು ಮಾನ್ಯ ಭಾರೀ ನೀರಾವರಿ ಸಚಿವರಿಗೆ ವಿಶೇಷ ಆಹ್ವಾನಿತರನ್ನಾಗಿ ಮಾಡಿ ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡಿದ್ದಾರೆ. ಕಂದಾಯ ಸಚಿವ ಅಧ್ಯಕ್ಷತೆಯಲ್ಲಿರತಕ್ಕಂತಹ ಈ ಸಚಿವ ಸಂಪುಟದ ಉಪ ಸಮಿತಿ ಮಾನ್ಯ ರಾಮಸ್ವಾಮಿಯವರು ಎತ್ತಿರತಕ್ಕಂತಹ ಮತ್ತು ಇನ್ನು ಅನೇಕ ಸದಸ್ಯರು ಎತ್ತಿರೆತಕ್ಕಂತಹ ವಿಚಾರ, ಕೂಲಿಗಾಗಿ ಕಾಳು ಮತ್ತು ಬರ ಪರಿಹಾರದ ಕೆಲಸಗಳು ಯಾವ ರೀತಿ ಮಾನಿಟರ್ ಮಾಡಬೇಕು ಎಂದು ಮೊನ್ನೆ ನಾವೆಲ್ಲಾ ಕೂತು ಇಸ್ರೋದವರಿಗೂ ಕರೆಸಿ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಾನು ಮತ್ತು ಮಾನ್ಯ ಶ್ರೀನಿವಾಸಗೌಡರು ಕೂತು ಸಭೆ ಮಾಡಿದ್ದೇವೆ. ಸಭೆ ಮಾಡಿ ಕುಡಿಯುವ ನೀರಿಗೆ ಎಲ್ಲಿ ತೊಂದರೆ ಇದೆ, ಮುಂದೆ ಆಗಸ್ಟ್ ಸೆಪ್ಟಂಬರ್‌ನಲ್ಲಿ ಏನೇನು ಪರಿಸ್ಥಿತಿ ಆಗಬಹುದು. ಇದೆಲ್ಲವನ್ನೂ ನಾವು ಸಮೀಕ್ಷೆ ಮಾಡಿದ್ದೇವೆ, ಇದನ್ನೆಲ್ಲಾ ನಾವು ರಿವ್ಯೂ ಮಾಡಿದ್ದೇವೆ. ರಿವ್ಯೂ ಮಾಡಿ ಇದಕ್ಕೆ ಒಂದು ಸ್ಪೆಸಿಫಿಕ್ ಗೈಡ್‌ಲೈನ್ಸ್ ಕೊಡಬೇಕಾಗುತ್ತದೆ. ಕೂಲಿಗಾಗಿ ಕಾಳು ಅಷ್ಟೇ ಅಲ್ಲ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಗೆ ಎಲ್ಲೆಲ್ಲಿ ನಾವು ಕಾಳನ್ನು ಕೊಡುತ್ತೇವೆ, ಅಲ್ಲಿ ಎಲ್ಲಾ ಕಡೆಯೂ ಮಂದಗತಿಯಲ್ಲಿ ಕಾರ್ಯ ಆಗುತ್ತಿರುವುದು ಸರ್ಕಾರದ ಗಮನಕ್ಕ ಬಂದಿದೆ. ಅದಕ್ಕೋಸ್ಕರ ಬಹುಶಃ ಒಂದು ವಾರದ ಒಳಗಡೆ ಇಡೀ ರಾಜ್ಯದಲ್ಲಿ ಅನ್ವಯವಾಗುವ ರೀತಿಯಲ್ಲಿ ಕೂಲಿಗಾಗಿ ಕಾಳು, ಬರ ಪರಿಹಾರದ ಕೆಲಸಗಳು, ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಆಗತಕ್ಕಂತಹ ಕೆಲಸಗಳು ಇದರ ಬಗ್ಗೆ ಸ್ಪೆಸಿಫಿಕ್ಕಾಗಿ ಗೈಡ್‌ಲೈನ್ಸ್ ಕೊಡುತ್ತೇವೆ. ತಾವು ಹೇಳಿದ ಹಾಗೆ ನಿರ್ದಿಷ್ಟವಾದ ಕೂಲಿ ಮತ್ತು ಇಷ್ಟು ಅಕ್ಕಿ ಕಾಳು ಎನ್ನುವುದು ರೇಷಿಯೋ ಸ್ಪೆಸಿಫೈ ಮಾಡಿ ಕ್ಯಾಬಿನೆಟ್ ಸಬ್ ಕಮಿಟಿ ಸಚಿವ ಸಂಪುಟದ ಮುಂದೆ ತಂದು ಇನ್ನೊಂದು ಎಂಟು ದಿವಸಗಳೊಳಗಡೆ ತೀರ್ಮಾನ

ಮಾಡುತ್ತೇವೆ. ಇವೆಲ್ಲಾ ಕೆಲಸಗಳಿಗೆ ಅನುಮೋದನೆ ಕೊಡಿಸುತ್ತೇವೆ. ಅನೇಕ ಜಿಲ್ಲೆಗಳಲ್ಲಿ ಹೋದ ವರ್ಷದ ಕೆಲಸಗಳು ಅಗಿಲ್ಲವೆಂದು ಅನೇಕ ಜನ ಗೌರವಾನ್ವಿತ ಶಾಸಕರು ಬೇಸರದಲ್ಲಿದ್ದಾರೆ. ಕೆಲಸಗಳೆಲ್ಲಾ ನಿಂತು ಹೋಗಿವೆ, ನಾವು ಹೊಸದಾಗಿ ಗೆದ್ದು ಬಂದಿದ್ದೇವೆ, ಎಲಕ್ಷನ್ ಆಗಿ ಎರಡು ತಿಂಗಳಾಯಿತು, ಯಾವುದೇ ಕೆಲಸ ನಡೆದಿಲ್ಲ ಎನ್ನತಕ್ಕಂತಹ ದೂರುಗಳು ಬಂದಿವೆ. ಅದಕ್ಕೋಸ್ಕರವಾಗಿ ಅದೆಲ್ಲಾ ಕೆಲಸಗಳು ಪ್ರಾರಂಭ ಮಾಡಲಿಕ್ಕೆ ನಾವು ಇಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸ್ಪಷ್ಟವಾದ ಸೂಚನೆಯನ್ನು ಕಳುಹಿಸುವವರಿದ್ದೇವೆ, ಇದು ಮೊದಲನೆಯದು. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂತಹ ವಿಚಾರವೂ ಸತ್ಯ. ಅದರಲ್ಲಿಯೂ ಗಡಿನಾಡಿನ ಪ್ರದೇಶ, ಬಹಳ ಹಿಂದುಳಿದಿರತಕ್ಕಂತಹ ಪ್ರದೇಶ, ಬರಗಾಲದಿಂದ ಹಲವಾರು ವರ್ಷಗಳಿಂದ ತೊಂದರೆಗೀಡಾಗಿರತಕ್ಕಂತಹ ಜಿಲ್ಲೆ. ತೆಂಗು ಮತ್ತು ರೇಷ್ಮೆ ಹಾಳಾಗಿರುವುದು ಸತ್ಯವಾದ ಮಾತ್ರ. 2000 ಕೊಳವೆ ಬಾವಿಗಳು ಒಂದು ವರ್ಷದಿಂದ ರಿಪೇರಿಯಾಗಿಲ್ಲವೆಂದು ಹೇಳೀದ್ದಾರೆ, 2000 ಕೊಳವೆ ಬಾವಿಗಳು ಹಾಳಾಗಿವೆ, ಅಥವಾ ಅದೆಷ್ಟು ಹಾಳಾಗಿವೆ ಎಂಬುದು ನನಗೆ ಗೊತ್ತಿಲ್ಲ, ಅವರ ಮಾಹಿತಿಯನ್ನು ನಾನು ನಂಬುತ್ತೇನೆ. ಕೊಳವೆ ಬಾವಿಗಳಲ್ಲಿ ಎಲ್ಲೆಲ್ಲಿ ನೀರು ಇದೆ, ಎಲ್ಲೆಲ್ಲಿ ರಿಪೇರಿ ಮಾಡುವುದಕ್ಕೆ ಸಾಧ್ಯ ಇದೆ, ಎಲ್ಲಿ ರಿಪೇರಿ ಮಾಡಬಹುದು. ಅದರ ಬಗ್ಗೆ ತಕ್ಷಣ ಸರ್ಕಾರದಿಂದ ಸೂಚನೆ ಕೊಟ್ಟು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಮತ್ತು ಅಧಿಕಾರಿಗಳಿಗೆ ತಿಳಿಸಿ ಸರಿಮಾಡಿಸತಕ್ಕಂತಹ ಭರವಸೆಯನ್ನು ಕೂಡ ಕೊಡುತ್ತೇವೆ. ಮಾನ್ಯ ಬಾಲರಾಜ್‌ರವರು ಚಾಮರಾಜ ನಗರ ಜಿಲ್ಲೆಯಲ್ಲಿ ಕೆಲವೆಲ್ಲಾ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲವೆಂದು ತಿಳಿಸಿದ್ದೀರಿ. ಅನೇಕ ಸದಸ್ಯರುಗಳು ಮಾತನಾಡಿ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೋಸ್ಕರವೇ ಈ ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡಿ ಯಾವುದೇ ರೀತಿಯ ದೂರು ಬರದ ಹಾಗೆ ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಕಾಳನ್ನು ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡತಕ್ಕಂತಹ ಹಣವನ್ನು ಮತ್ತು ಅಸೆಟ್ ಕ್ರಿಯೇಟ್ ಮಾಡತಕ್ಕಂತಹ ಕೆಲಸವನ್ನು ನಾವು ಮಾಡುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ.

(VI) ವಿಷಯ : ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಪರಿಹಾರ ಕುರಿತು

† **ಶ್ರೀ ಆರ್. ಧ್ರುವನಾರಾಯಣ (ಸಂತೇಮಾರ ಹಳ್ಳಿ) :** ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆಗೆ ಪರಿಹಾರ ನೀಡಲಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ(ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):** ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ನೀಡಬಯಸುತ್ತೇನೆ.